ನಾವು ಇವತ್ತು ಪ್ರಶ್ನೆ ಹಾಕಿರತಕ್ಕದ್ದು. "ಇಲ್ಲ" ಎಂದು ಹೇಳಿದ ಮೇಲೆ ಬಹುಶಃ ಅದರ ಬಗ್ಗೆ ಕೇಳುವ ಅವಶ್ಯಕತೆ ಇಲ್ಲ.

ಅಧ್ಯಕ್ಷರು:- ಶಿವಕುಮಾರ್ ಅವರು ಹಾಂಕಾಂಗ್, ಚೈನಾಗೆ ಯಾವಾಗ ಟ್ರಾನ್ಸ್‌ಫರ್ ಆಗುವುದರ ಬಗ್ಗೆ ಏನಾದರೂ ಕೇಳುತ್ತೀರೋ?

ಶ್ರೀ ಜಿ.ಬಿ. ಶಿವಕುಮಾರ್:- ನನ್ನದು ಒಂದು ನಿಮಿಷ ಇದೆ. ಇದಾದ ತಕ್ಷಣ ಕೇಳುತ್ತೇನೆ.

ಅಧ್ಯಕ್ಷರು:- ಇಲ್ಲ ಕುಳಿತುಕೊಳ್ಳಿ ಸುಮ್ಮನೆ ತಮಾಷೆಗೆ ಹೇಳಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅವರಿಗೆ ಹಾಂಕಾಂಗ್, ಚೈನಾಗೆ ಅವಕಾಶ ಕೊಡುವ ಮುಂಚೆ ನಮಗೆ ಕೃಷ್ಣಾ ಕಾವೇರಿ ವಿಚಾರದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸಹಾಯ ಮಾಡುತ್ತೀರೋ ಎನ್ನುವುದು ನಮ್ಮ ಪ್ರಶ್ನೆ.

ಶ್ರೀ ಜಿ.ಬಿ. ಶಿವಕುಮಾರ್:- ಕೃಷ್ಣಾ ಜಲಾನಯನ ಪ್ರದೇಶಕ್ಕೂ ಮತ್ತು ಕಾವೇರಿ ವ್ಯತ್ಯಾಸದ ಬಗ್ಗೆ ನನ್ನದೊಂದು ವಿಚಾರ ರೂಲ್ 69ರಲ್ಲಿ ಕಳುಹಿಸಿಕೊಟ್ಟಿದ್ದೇನೆ.

(5) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಸಿ. ನಾಣಯ್ಯ (ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಸಭಾಧ್ಯಕ್ಷರೆ, ಒಂದನೇ ಆಗಸ್ಟ್ 96ರ ಹತ್ತೊಂಭತ್ತನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 50 ಪ್ರಶ್ನೆಗಳ ಪೈಕಿ 35 ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿಷಯ:- ವಿಜಾಪುರದಲ್ಲಿರುವ ಸಾರ್ವಜನಿಕ ಗ್ರಂಥಾಲಯ ಹಾಗೂ ರೇಡಿಯೋ ಮೈದಾನ ಕುರಿತು.

1051 (1967) **ಶ್ರೀ ಬಸನಗೌಡ ರಾ. ಪಾಟೀಲ್, (ವಿಜಾಪುರ):-** ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ನಗರಸಭೆಯ ಹತ್ತಿರವಿರುವ ಸಾರ್ವಜನಿಕ ಗ್ರಂಥಾಲಯ ಹಾಗೂ ರೇಡಿಯೋ ಮೈದಾನದ ಭೂ ಹಕ್ಕುದಾರರು ಯಾರು? ಈ ಆಸ್ತಿಯನ್ನು ನೀಡಿರುವ ಹಿಂದಿನ ಹಕ್ಕುದಾರರು ನಿರ್ದಿಷ್ಟವಾಗಿ ಸೂಚಿಸಿರುವ ಉಪಯೋಗಕ್ಕಾಗಿಯೇ ಬಳಸಲಾಗುತ್ತಿದೆಯೇ?

ಆ) ನಗರಸಭೆ ಈ ಸ್ಥಳದಲ್ಲಿ ವಾಣಿಜ್ಯ ಸಂಕೀರ್ಣ ಮಾಡಲು ಉದ್ದೇಶಿಸಿದೆಯೇ? (ಸಂಪೂರ್ಣ ವಿವರ ನೀಡುವುದು)

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ಸಾರ್ವಜನಿಕ ಗ್ರಂಥಾಲಯ ಇಲಾಖೆ ಮತ್ತು ಬಿಜಾಪುರ ನಗರಸಭೆ. ಈ ಆಸ್ತಿಗಳನ್ನು ನಿಗದಿಪಡಿಸಿದ ಉಪಯೋಗಕ್ಕಾಗಿಯೇ ಬಳಸಲಾಗುತ್ತಿದೆ.

ಆ) ಹೌದು, ಬಿಜಾಪುರ ನಗರಸಭೆ ಹಾಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆ ಇವುಗಳು ಈ ಸ್ಥಳದಲ್ಲಿ ರೂ.3.74 ಕೋಟಿ ಅಂದಾಜು ವೆಚ್ಚದಲ್ಲಿ ವಾಣಿಜ್ಯ ಸಂಕೀರ್ಣವನ್ನು ನಿರ್ಮಾಣ ಮಾಡಲು ಉದ್ದೇಶಿಸಿದೆ. ಈ ಬಗ್ಗೆ ಸರ್ಕಾರವು ಇನ್ನೂ ಅಂತಿಮ ತೀರ್ಮಾನ ತೆಗೆದುಕೊಂಡಿಲ್ಲ.

ವಿಷಯ:- ವಿಜಾಪುರ ನಗರಕ್ಕೆ ಒಳಚರಂಡಿ ವ್ಯವಸ್ಥೆ.

1052 (1089) ಶ್ರೀ ಬಸವನಗೌಡ ರಾ. ಪಾಟೀಲ, (ವಿಜಾಪುರ):-ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ನಗರದ ಒಳಚರಂಡಿ ವ್ಯವಸ್ಥೆ ಹಳೆಯದಾಗಿದ್ದು ಬೆಳೆಯುತ್ತಿರುವ ಪ್ರದೇಶದಲ್ಲಿ ಒಳಚರಂಡಿ ಯೋಜನೆ ಇಲ್ಲದೇ ನಾಗರೀಕರು ತೀವ್ರ ಸಮಸ್ಯೆ ಎದುರಿಸುತ್ತಿರುವ ವಿಚಾರವು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಲಿ ಇರುವ ಒಳಚರಂಡಿ ವ್ಯವಸ್ಥೆಯ ಕಲ್ಮಶ ನಿಲ್ಲುವ ಪ್ರದೇಶವು ನಗರದ ಒಳ ಪ್ರದೇಶದಲ್ಲಿ ಸೇರಿದ್ದರಿಂದ ಸುತ್ತ ಮುತ್ತಲಿನಲ್ಲಿರುವ ನಾಗರೀಕರು ತೀವ್ರ ತೊಂದರೆ ಮತ್ತು ಅನಾರೋಗ್ಯ ಅನುಭವಿಸುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸರ್ಕಾರದವರು ತೆಗೆದುಕೊಳ್ಳುವ ಕ್ರಮಗಳೇನು?

ಇ) ಬೆಳೆಯುತ್ತಿರುವ ನಗರದ ಹೊರವಲಯಗಳಿಗೆ ಒಳಚರಂಡಿ ಯೋಜನೆ ಯಾವಾಗ ಪ್ರಾರಂಭಿಸಲಾಗುವುದು?

ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ಹೌದು.

ಆ) ಇಲ್ಲ.

ಇ) ಆದಷ್ಟು ಶೀಘ್ರವಾಗಿ ಹಣದ ಲಭ್ಯತೆಯ ಮೇರೆಗೆ.

ವಿಷಯ:- ತಾಳಿಕೋಟೆ ಪುರಸಭೆಯಲ್ಲಿ ಪೌರ ಕಾರ್ಮಿಕರ ಕೊರತೆ

1053 (1757) ಶ್ರೀ ಬಸವನಗೌಡ ರಾ. ಪಾಟೀಲ್, (ವಿಜಾಪುರ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಳಿ ಕೋಟೆ ಪುರಸಭೆಯಲ್ಲಿ ಪೌರ ಕಾರ್ಮಿಕರ ತೀವ್ರ ಕೊರತೆಯಿಂದ ನಗರದಲ್ಲಿ ಸ್ವಚ್ಛತೆಯು ಗಂಭೀರ ರೂಪ ತಾಳಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಪುರಸಭೆಯಲ್ಲಿ ಸದ್ಯಕ್ಕಿರುವ ಪೌರ ಕಾರ್ಮಿಕರ ಸಂಖ್ಯೆ ಎಷ್ಟು?

ಇ) ಬೆಳೆಯುತ್ತಿರುವ ಪಟ್ಟಣಕ್ಕೆ ಈಗಿರುವ ಪೌರ ಕಾರ್ಮಿಕರ ಸಂಖ್ಯೆ ಸಮರ್ಥನೀಯವೇ?

ಈ) ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಉ) ಯಾವಾಗ ಪೌರಕಾರ್ಮಿಕರನ್ನು ನೇಮಕಾತಿ ಮಾಡಿಕೊಳ್ಳಲಾಗುವುದು?